# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 798 |
| 2 | ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 13–07–2023 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಬಹು ಅಂತಸ್ತಿನ ಬೃಹತ್ ವಸತಿ ಸಮುಚ್ಚಯಗಳನ್ನು ಮತ್ತು ಶಾಪಿಂಗ್ ಮಾಲ್‌ಗಳನ್ನು ನಿರ್ಮಾಣ ಮಾಡಲು ಇರುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂದಿಸಿದಂತೆ ಬೃಹತ್ ವಸತಿ ಸಮುಚ್ಚಯಗಳನ್ನು ಮತ್ತು ಶಾಪಿಂಗ್ ಮಾಲ್‌ಗಳನ್ನು ನಿರ್ಮಾಣ ಮಾಡಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.<br>➢ ನಿವೇಶನದ ವಿಸ್ತೀರ್ಣ 20000 ಚ.ಮೀ ಗಿಂತ ಹೆಚ್ಚಿಗೆ ಇದ್ದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಪಡೆದು ವಿವಿಧ ಇಲಾಖೆಗಳಿಂದ ನಿರಾಪೇಕ್ಷಣಾ ಪತ್ರವನ್ನು ಅವಶ್ಯಕತೆಗನುಗುಣವಾಗಿ ಸಲ್ಲಿಸಿದ ನಂತರ ಪರಿಷ್ಕೃತ ಮಹಾ ಯೋಜನೆ – 2015ರ ವಲಯ ನಿಯಮಾವಳಿ ಹಾಗೂ ಕಟ್ಟಡ ಉಪವಿಧಿ – 2003 ರಲ್ಲಿ ಇರುವ ನಿಯಮಗಳನ್ವಯ ಅನುಮತಿ ನೀಡಲಾಗುತ್ತಿದೆ.<br>➢ ನಿವೇಶನದ ವಿಸ್ತೀರ್ಣ 20000 ಚ.ಮೀಗಿಂತ ಕಡಿಮೆ ಇದ್ದಲ್ಲಿ ಪಾಲಿಕೆಯಲ್ಲಿಯೇ ವಿವಿಧ ಇಲಾಖೆಗಳಿಂದ ನಿರಾಪೇಕ್ಷಣಾ ಪತ್ರವನ್ನು ಅವಶ್ಯಕತೆಗನುಗುಣವಾಗಿ ಸಲ್ಲಿಸಿದ ನಂತರ ಪರಿಷ್ಕೃತ ಮಹಾ ಯೋಜನೆ – 2015ರ ವಲಯ ನಿಯಮಾವಳಿ ಹಾಗೂ ಕಟ್ಟಡ ಉಪವಿಧಿ – 2003 ರಲ್ಲಿ ಇರುವ ನಿಯಮಗಳನ್ವಯ ಅನುಮತಿ ನೀಡಲಾಗುತ್ತಿದೆ. |
| ಆ) | ಬೆಂಗಳೂರು ಅಭಿವೃದ್ಧಿ ದೃಷ್ಟಿಯಿಂದ ಯೋಜಿತ ರೂಪು-ರೇಷೆಗಳಂತೆ ಬೃಹತ್ ವಸತಿ ಸಮುಚ್ಚಯಗಳನ್ನು ಮತ್ತು ಶಾಪಿಂಗ್ ಮಾಲ್ ನಿರ್ಮಾಣಕ್ಕೆ ಅನುಮತಿ ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಯೋಜಿತ ರೂಪು-ರೇಷೆಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ಅಭಿವೃದ್ದಿ ಪ್ರಾಧಿಕಾರ ವತಿಯಿಂದ ಮಹಾ ಯೋಜನೆ ಮತ್ತು ವಲಯ ನಿಯಮಾವಳಿಯನ್ನು ತಯಾರಿಸಿದ್ದು, ಸದರಿ ಮಹಾ ಯೋಜನೆಯಲ್ಲಿ ವಿವಿಧ ಚಟುವಟಿಕೆಗಳಿಗೆ ನಿಯಮಾವಳಿಯಡಿಯಲ್ಲಿ ಭೂ ಉಪಯೋಗಗಳ ಅನುಸಾರ ಪಾಲಿಕೆಯ ನಗರ ಯೋಜನಾ ವಿಭಾಗಕ್ಕೆ ಸರ್ಕಾರಿ / ಖಾಸಗಿ ವಸತಿ ಸಮುಚ್ಚಯಗಳು ಮತ್ತು ವಾಣಿಜ್ಯ (ಶಾಪಿಂಗ್ ಮಾಲ್) ಉದ್ದೇಶಗಳ ನಿರ್ಮಾಣಕ್ಕೆ ಅನುಮತಿ ಕೋರಿ ಪ್ರಸ್ತಾವನೆಯು ಬಂದಿದ್ದಲ್ಲಿ ನಿಯಮಗಳ ಅಡಿಯಲ್ಲಿ ಪರಿಶೀಲಿಸಿ, ಅನುಮತಿ ನೀಡಲಾಗುತ್ತಿರುತ್ತದೆ. |
| ಇ) | ಬೃಹತ್ ವಸತಿ ಸಮುಚ್ಚ ಹಾಗೂ ಶಾಪಿಂಗ್ ಮಾಲ್‌ಗಳ ನಿರ್ಮಾಣಕ್ಕೆ ಸರ್ಕಾರದ ಯಾವ ಯಾವ ಇಲಾಖೆಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ ಮತ್ತು ಅನುಮತಿ ನೀಡಲು ಇರುವ ಷರತ್ತು ಮತ್ತು ನಿಬಂಧನೆಗಳೇನು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಸತಿ ಸಮುಚ್ಚಯ ಹಾಗೂ ಶಾಪಿಂಗ್ ಮಾಲ್‌ಗಳ ನಿರ್ಮಾಣಕ್ಕೆ ಅವಶ್ಯಕತೆಗನುಗುಣವಾಗಿ ಈ ಕೆಳಕಂಡ ಇಲಾಖೆ/ ಪ್ರಾಧಿಕಾರಗಳಿಂದ ನಿರಾಪೇಕ್ಷಣಾ ಪತ್ರವನ್ನು ಪಡೆಯಬೇಕಾಗಿರುತ್ತದೆ.<br>➢ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>➢ ಕರ್ನಾಟಕ ರಾಜ್ಯ ಅಗ್ನಿ ಶಾಮಕ ಇಲಾಖೆ |

| | | |
|---|---|---|
| | | ➢ ಬೆಂಗಳೂರು ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿ<br>➢ ಭಾರತೀಯ ವೈಮಾನಿಕ ಪ್ರಾಧಿಕಾರ / ಹೆಚ್.ಎ.ಎಲ್ / ಜಕ್ಕೂರು ಫ್ಲೇಯಿಂಗ್ ಸ್ಕೂಲ್ / ಯಲಹಂಕ ಏರ್‌ಫೋರ್ಸ್ (ವ್ಯಾಪ್ತಿಗೆ ಒಳಪಟ್ಟದ್ದಲ್ಲಿ)<br>➢ ಕರ್ನಾಟಕ ರಾಜ್ಯ ಪರಿಸರ ತಿರುವಳಿ ಸಮಿತಿ<br>➢ ಬೆಂಗಳೂರು ಮೆಟ್ರೋ ನಿಗಮ ನಿಯಮಿತ<br>➢ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ<br>➢ ಭಾರತ ಸಂಚಾರ ನಿಗಮ ನಿಯಮಿತ<br><br>ಈ ಸಂಬಂಧ ಮೇಲ್ಕಂಡ ಇಲಾಖೆಗಳು ವಿಧಿಸುವ ನಿಬಂಧನೆ ಮತ್ತು ಷರತ್ತುಗಳನ್ನು ಪಾಲಿಸಬೇಕಾಗಿರುತ್ತದೆ. |
| ಈ) | ನಿರ್ಮಾಣವಾಗುತ್ತಿರುವ ವಸತಿ ಸಮುಚ್ಚಯಗಳಿಂದ ಭವಿಷ್ಯದಲ್ಲಿ ನೀರು ಮತ್ತು ಅಂತರ್ಜಲ ಮಟ್ಟದಲ್ಲಿ ಕುಸಿತ, ವಿಪರೀತ ವಾಹನಗಳಿಂದ ಸಂಚಾರಿ ದಟ್ಟಣೆ ಮುಂತಾದ ಮೂಲ ಸೌಲಭ್ಯಗಳ ಸಮಸ್ಯೆ ಉಂಟಾಗುವುದಿಲ್ಲವೇ; ಹಾಗಿದ್ದಲ್ಲಿ, ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ನಕ್ಷೆ ಅನುಮೋದನೆ ಸಂದರ್ಭದಲ್ಲಿ ಆರ್.ಎಂ.ಪಿ–2015ರ ವಲಯ ನಿಯಮಾವಳಿಗಳು 3.16 (13) ಮತ್ತು ಕಟ್ಟಡ ಉಪ ವಿಧಿಗಳು ನಿಯಮ 32 ರಂತೆ 240.00 ಚ.ಮೀಗಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನದಲ್ಲಿ ನಿರ್ಮಾಣವಾಗುವ ಕಟ್ಟಡಗಳಲ್ಲಿ ಕಡ್ಡಾಯವಾಗಿ ಮಳೆ ನೀರು ಕೊಯ್ಲು ಪದ್ಧತಿ ಅಳವಡಿಸಿ, ನಕ್ಷೆ ಅನುಮೋದಿಸಿ, ಅವುಗಳಲ್ಲಿ ಸ್ವಾಧೀನಾನುಭವ ಪ್ರಮಾಣ ಪತ್ರ ಕೋರಿದಾಗ ಅದನ್ನು ದೃಢೀಕರಿಸಿಕೊಂಡು ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಲಾಗುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ನೀಡುವ ನಿರಾಕ್ಷೇಪಣಾ ಪತ್ರದಂತೆ ಎಸ್.ಟಿ.ಪಿ ಅಳವಡಿಸಿಕೊಂಡು ಅನುಮೋದನೆ ನೀಡಲಾಗುತ್ತಿದೆ.<br><br>ಬೆಂಗಳೂರು ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿ ರವರಿಂದ ಪಡೆದ ನಿರಾಕ್ಷೇಪಣಾ ಪತ್ರ ನೀಡಿದ ನಂತರವೇ ಈ ರೀತಿ ಕಟ್ಟಡಕ್ಕೆ ಅನುಮತಿ ನೀಡಲಾಗುತ್ತಿದೆ. |

**ನಅಇ 248 ಎಂಎನ್‌ಯು 2023**

(ಡಿ.ಕೆ ಶಿವಕುಮಾರ್)
ಉಪ ಮುಖ್ಯಮಂತ್ರಿ